## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 22.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ ವಾಯ್ ವಿ ಎಂ ವಕೀಲರಿಂದಃ**

ನಾನು ಪ್ರ ವ ವರದಿಯನ್ನು ನೋಡಿ ಓದಿಕೊಂಡಿರುತ್ತೇನೆ. ಪ್ರ ವ ವರದಿಯಲ್ಲಿ ಎದುರುದಾರ ನಂ.1 ಇವರ ವಾಹನ ಎದುರುದಾರ ನಂ.3 ಇವರ ವಾಹನಕ್ಕೆ ಡಿಕ್ಕಿಪಡಿಸಿದೆ ಎಂದು ಬರೆದಿದೆ ಎಂದರೆ ಸರಿ. ನನಗೆ ಡಿಕ್ಕಿಪಡಿಸಿದ ವಾಹನದ ನಂ.ಕೆಎ-63/2811 ಎಂದರೆ ಸರಿ. ಕೆಎ-30/8778 ವಾಹನ ನನಗೆ ಡಿಕ್ಕಿಪಡಿಸಿಲ್ಲ ಎಂದರೆ ಸರಿ. ನಾನು ಪಿರ್ಯಾದಿ ಸಲ್ಲಿಸಿಲ್ಲ ಎಂದರೆ ಸರಿ. ಪಿರ್ಯಾದಿಯನ್ನು ಸ್ಥಳೀಯರು ನೀಡಿರುತ್ತಾರೆ. 3 ನೇ ಎದುರುದಾರ ರನ್ನು ಬಚಾವ ಮಾಡಲು ಪಿರ್ಯಾದುದಾರರು 1 ನೇ ಎದುರುದಾರ ವಾಹನದ ಮೇಲೆ ಸುಳ್ಳು ಪಿರ್ಯಾದಿ ಸಲ್ಲಿಸಿರುತ್ತಾರೆ ಎಂದರೆ ನಿಜ. ಎದುರುದಾರ ನಂ.1 ಇವರ ವಾಹನ ಏರ್ ಪೋರ್ಟ್ ಕಡೆಯಿಂದ ಹುಬ್ಬಳ್ಳಿ ಕಡೆಗೆ ನಿಧಾನವಾಗಿ ಸಾಗುತ್ತಿತ್ತು ಎಂದರೆ ಸರಿ. ಆ ವಾಹನದ ಮುಂದೆ ಹೊರಟಿದ್ದ ಎದುರುದಾರ ನಂ.3 ಇವರ ವಾಹನ ವೇಗವಾಗಿ ಹೊರಟಿತ್ತು ಎಂದರೆ ನಿಜ. ವೇಗವಾಗಿ ಬಂದ ಎದುರುದಾರ ನಂ.3 ಇವರ ವಾಹನ ನನ್ನ ಸ್ಕೂಟಿಗೆ ಡಿಕ್ಕಿಪಡಿಸಿತು ಎಂದರೆ ಸರಿ.

2. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ ಎಂದರೆ ನಿಜ. ನನಗೆ ಪ್ರಜ್ಞೆ ಬಂದ ನಂತರ ಪೊಲೀಸರು ನನ್ನ ಬಳಿ ಯಾವುದೇ ಮರುಹೇಳಿಕೆ ಪಡೆದಿಲ್ಲ ಎಂದರೆ ಸರಿ. 1 ನೇ ಎದುರುದಾರ ನನಗೆ ಅಪಘಾತಪಡಿಸದೇ ಇರುವ ಕಾರಣ ಅವರು ನನಗೆ ಪರಿಹಾರ ನೀಡಲು ಬಾಧ್ಯಸ್ಥರು ಅಲ್ಲ ಎಂದರೆ ನಿಜ. 3 ನೇ ಎದುರುದಾರನ ವಾಹನ ನನಗೆ ಡಿಕ್ಕಿಪಡಿಸಿದ ಕಾರಣ ನಾನು ಕೇಳಿಕೊಂಡ ಪರಿಹಾರವನ್ನು 3 ನೇ ಎದುರುದಾರ ಅಥವಾ ಅವರ ವಾಹನದ ವಿಮಾ ಕಂಪನಿಯವರೇ ನನಗೆ ನೀಡಲು ಜವಾಬ್ದಾರರು ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**